# ಅಧ್ಯಾಯ-I

## ಪರಿಚಯ

ಜೂನ್ 2015 ರಲ್ಲಿ ಪ್ರಾರಂಭಿಸಿದ ಪ್ರಧಾನ ಮಂತ್ರಿ ಆವಾಸ್ ಯೋಜನೆಯು–ಎಲ್ಲರಿಗೂ ವಸತಿ (ನಗರ) [ಪಿಎಮ್ಎವೈ (ಯು)] ಏಳು ವರ್ಷಗಳ ಅವಧಿಯಲ್ಲಿ ನಗರ ಪ್ರದೇಶದ ಎಲ್ಲಾ ಬಡವರಿಗೆ ವಸತಿ ಒದಗಿಸುವುದನ್ನು ಆಲೋಚಿಸಿತ್ತು. ಕರ್ನಾಟಕ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಹೊಂದಾಣಿಕೆಯಾಗುವ ಕರ್ನಾಟಕ ಕೈಗೆಟಕುವ ವಸತಿ ನೀತಿ (ಕರ್ನಾಟಕ ಅಫೋರ್ಡಬಲ್ ಹೌಸಿಂಗ್ ಪಾಲಿಸಿ), 2016ನ್ನು ಅಧಿಸೂಚಿಸಿತು (ಮೇ 2016) ಮತ್ತು ಅಸ್ತಿತ್ವದಲ್ಲಿರುವ ರಾಜ್ಯ ವಲಯ ವಸತಿ ಯೋಜನೆಗಳನ್ನು[1] ಈ ಯೋಜನೆಯಲ್ಲಿ ಸೇರಿಸಿತು. ಯೋಜನೆಯು ಕೆಳಗಿನ ನಾಲ್ಕು ಘಟಕಗಳನ್ನು ಒಳಗೊಂಡಿತ್ತು:

- ಕೊಳೆಗೇರಿಗಳನ್ನು ಅವುಗಳ ಮೂಲ ಸ್ಥಾನದಲ್ಲಿ ಪುನರ್ ಅಭಿವೃದ್ಧಿಪಡಿಸುವುದು (ಐಎಸ್ಎಸ್ಆರ್)– ಭೂಮಿಯನ್ನು ಸಂಪನ್ಮೂಲವಾಗಿ ಬಳಸಿಕೊಂಡು ಖಾಸಗಿ ಅಭಿವೃದ್ಧಿದಾರರ ಸಹಭಾಗಿತ್ವದಲ್ಲಿ ಕೊಳೆಗೇರಿ ನಿವಾಸಿಗಳ ಪುನರ್ವಸತಿ
- ಸಾಲ ಆಧಾರಿತ ಸಹಾಯಧನ ಯೋಜನೆ (ಸಿಎಲ್ಎಸ್ಎಸ್)–ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್)/ಕಡಿಮೆ ಆದಾಯವಿರುವ/ಮಧ್ಯಮ ಆದಾಯವಿರುವವರಿಗೆ ಸಾಲ ಆಧಾರಿತ ಸಹಾಯಧನ ಯೋಜನೆಯಲ್ಲಿ ವಸತಿಯನ್ನು ಒದಗಿಸುವುದು.
- ಪಾಲುದಾರಿಕೆಯಲ್ಲಿ ಕೈಗೆಟಕುವ ಬೆಲೆಯಲ್ಲಿ ವಸತಿ (ಎಹೆಚ್ಪಿ) – ಸಾರ್ವಜನಿಕ ಅಥವಾ ಖಾಸಗಿ ವಲಯದ ಸಹಭಾಗಿತ್ವದ ಮೂಲಕ ಪ್ರತಿಯೊಂದು ಆರ್ಥಿಕವಾಗಿ ಹಿಂದುಳಿದ ವರ್ಗದ ಮನೆಗೆ ₹1.50 ಲಕ್ಷ ಕೇಂದ್ರದ ಅನುದಾನದೊಂದಿಗೆ ಪೂರಕ ನೆರವು.
- ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ (ಬಿಎಲ್ಸಿ)– ಹೊಸ ಮನೆ ಅಥವಾ ಅಭಿವೃದ್ಧಿಗಾಗಿ ಪ್ರತಿ ಇಡಬ್ಲ್ಯುಎಸ್ ಮನೆಗೆ ₹1.50 ಲಕ್ಷ ಕೇಂದ್ರದ ನೆರವು.

ಕರ್ನಾಟಕ ಸರ್ಕಾರದ ವಸತಿ ಇಲಾಖೆಯು ಅನುಷ್ಠಾನಗೊಳಿಸಿದ ಯೋಜನೆಗಳಾದ ಎಹೆಚ್ಪಿ ಮತ್ತು ಬಿಎಲ್ಸಿ ಘಟಕಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

## 1.1 ಆಡಳಿತ ಮತ್ತು ಅನುಷ್ಠಾನ ರಚನೆ

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ (ಎಮ್ಒಹೆಚ್ಯುಎ[2]) ಕಾರ್ಯದರ್ಶಿಯವರ ನೇತೃತ್ವದ ಕೇಂದ್ರ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿಯು (ಸಿಎಸ್ಎಮ್ಸಿ) ಭಾರತ ಸರ್ಕಾರದ ಮಟ್ಟದಲ್ಲಿ ಯೋಜನೆಯ ಉನ್ನತಾಧಿಕಾರ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರವು ಮುಖ್ಯ ಕಾರ್ಯದರ್ಶಿಗಳು ಮತ್ತು ಕರ್ನಾಟಕ ಸರ್ಕಾರದ ವಸತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ರಾಜ್ಯ ಮಟ್ಟದ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್ಎಲ್ಎಸ್ಎಮ್ಸಿ) ಹಾಗೂ ರಾಜ್ಯ ಮಟ್ಟದ ಮೌಲ್ಯಮಾಪನ ಸಮಿತಿಗಳನ್ನು (ಎಸ್ಎಲ್ಎಸಿ) ರಚಿಸಿತು (ಜನವರಿ 2016) ಮತ್ತು ಯೋಜನೆಯಡಿಯ ಎಹೆಚ್ಪಿ ಮತ್ತು ಬಿಎಲ್ಸಿ ಘಟಕಗಳ ಅನುಷ್ಠಾನಕ್ಕಾಗಿ ರಾಜೀವ್‌ಗಾಂಧಿ

[1] ಡಾ.ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ, ದೇವರಾಜ್ ಅರಸ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆ

[2] ನಗರಾಭಿವೃದ್ಧಿ ಸಚಿವಾಲಯ ಮತ್ತು ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯದೊಂದಿಗೆ 6–7–2017ರಂದು ವಿಲೀನಗೊಂಡು ಸ್ಥಾಪಿತವಾದ ಮಂತ್ರಾಲಯ

ವಸತಿ ನಿಗಮ ನಿಯಮಿತವನ್ನು (ಆರ್‌ಜಿಹೆಚ್‌ಸಿಎಲ್) ರಾಜ್ಯಮಟ್ಟದ ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿತು.

ಯೋಜನೆಯ ಅನುಷ್ಠಾನದಲ್ಲಿ ಭಾಗಿಗಳಾಗಿರುವ ವಿವಿಧ ಸಂಸ್ಥೆಗಳ ಪಾತ್ರಗಳನ್ನು **ನಕ್ಷೆ–1.1**ರಲ್ಲಿ ನೀಡಲಾಗಿದೆ:

**ನಕ್ಷೆ–1.1: ಪಿಎಮ್‌ಎವೈ (ಯು) ಯೋಜನೆಯ ಅನುಷ್ಠಾನ ರಚನೆ**




ಎಸ್‌ಎಲ್‌ಟಿಸಿ – ರಾಜ್ಯ ಮಟ್ಟದ ತಾಂತ್ರಿಕ ಸಮಿತಿ
ಹೆಚ್‌ಎಫ್‌ಎಪಿಒಎ – ಎಲ್ಲರಿಗೂ ವಸತಿ ಕಾರ್ಯ ಯೋಜನೆ
ಎಐಪಿ – ವಾರ್ಷಿಕ ಅನುಷ್ಠಾನ ಯೋಜನೆ
ಡಿಪಿಆರ್ – ಸವಿವರ ಯೋಜನಾ ವರದಿ
ಸಿಎಲ್‌ಟಿಸಿ – ನಗರ ಮಟ್ಟದ ತಾಂತ್ರಿಕ ಸಮಿತಿ
ಕೆಎಸ್‌ಡಿಬಿ – ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ
ಯುಎಲ್‌ಬಿ – ನಗರ ಸ್ಥಳೀಯ ಸಂಸ್ಥೆ

## 1.2 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವು ಕಾರ್ಯನಿರ್ವಹಣ ಲೆಕ್ಕಪರಿಶೋಧನೆಗಳ ಉದ್ದೇಶಗಳಾಗಿದ್ದವು:

- ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಉದ್ದೇಶಿತ ಫಲಾನುಭವಿಗಳನ್ನು ಗುರುತಿಸುವ ವ್ಯವಸ್ಥೆಯು ಸಾಕಷ್ಟಿದ್ದಿತೇ, ಪರಿಣಾಮಕಾರಿಯಾಗಿದ್ದಿತೇ ಮತ್ತು ಎಲ್ಲಾ ಅರ್ಹ ಫಲಾನುಭವಿಗಳ ಸೇರ್ಪಡೆ ಮತ್ತು ಅನರ್ಹ ಫಲಾನುಭವಿಗಳ ಹೊರಗಿಡುವಿಕೆಯನ್ನು ಖಚಿತಪಡಿಸಿತ್ತೇ;

- 2022ರ ವೇಳೆಗೆ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಯೋಜನೆಗಳನ್ನು ಎಲ್ಲಾ ನಗರ ಬಡವರಿಗೆ ವಸತಿ ಒದಗಿಸಲು ಸಮಗ್ರವಾಗಿ ಯೋಜಿಸಲಾಗಿತ್ತೇ ಮತ್ತು ಕಾರ್ಯಗತಗೊಳಿಸಲಾಗಿತ್ತೇ;
- ಅಂತರ್ಗತ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ಕಾರ್ಯವಿಧಾನವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತೇ.

## 1.3 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ಮಾರ್ಗಸೂಚಿಗಳು;
- ಕರ್ನಾಟಕ ಕೈಗೆಟಕುವ ವಸತಿ ನೀತಿ, 2016, ಕರ್ನಾಟಕ ಕೊಳೆಗೇರಿ ಪ್ರದೇಶಗಳ ಅಭಿವೃದ್ಧಿ ನೀತಿ, 2016 ಮತ್ತು ರಾಜ್ಯ ವಲಯ ನಗರ ವಸತಿ ಯೋಜನೆಗಳ ಮಾರ್ಗಸೂಚಿಗಳು;
- ಪಿಎಮ್‌ಎವೈ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಮ್‌ಐಎಸ್) ಬಳಕೆದಾರರ ಕೈಪಿಡಿ, 2016.

## 1.4 ಲೆಕ್ಕಪರಿಶೋಧನಾ ವ್ಯಾಪ್ತಿ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಅಕ್ಟೋಬರ್ 2020ರಿಂದ ಜುಲೈ 2021ರವರೆಗೆ ನಡೆಸಲಾಯಿತು ಮತ್ತು ಇದು 2015-2021ರ ಅವಧಿಯಲ್ಲಿ ಕರ್ನಾಟಕದಲ್ಲಿ ಪಿಎಮ್‌ಎವೈ ಯೋಜನೆಯ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಅನುಷ್ಠಾನವನ್ನು ಒಳಗೊಂಡಿದೆ. ಇದು ಸಚಿವಾಲಯ, ಆರ್‌ಜಿಹೆಚ್‌ಸಿಎಲ್, ಕೆಎಸ್‌ಡಿಬಿ, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು 36 ನಗರ ಸ್ಥಳೀಯ ಸಂಸ್ಥೆಗಳಲ್ಲಿನ ದಾಖಲೆಗಳ ಪರಿಶೀಲನೆಯನ್ನು ಒಳಗೊಂಡಿತ್ತು ಮತ್ತು ಅವುಗಳನ್ನು ಬಹುಹಂತದ ಶ್ರೇಣೀಕೃತ ಮಾದರಿಯನ್ನು ಅಳವಡಿಸಿಕೊಳ್ಳುವ ಮೂಲಕ ಆಯ್ಕೆಮಾಡಲಾಗಿತ್ತು. ಇದಲ್ಲದೆ, ಫಲಾನುಭವಿಗಳ ಸಮೀಕ್ಷೆಯನ್ನು ನಡೆಸಲು 803 ಫಲಾನುಭವಿಗಳನ್ನು (ಎಸ್‌ಸಿ/ಎಸ್‌ಟಿ/ಸಾಮಾನ್ಯರ ಅನುಪಾತದ ಪ್ರಾತಿನಿಧ್ಯದೊಂದಿಗೆ ಪ್ರತಿ ಯೋಜನೆಗೆ ಕನಿಷ್ಠ ನಾಲ್ಕು) ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗಿತ್ತು. ಆಯ್ದ ಜಿಲ್ಲೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಾದರಿ ಯೋಜನೆಗಳ ವಿವರಗಳನ್ನು **ಅನುಬಂಧ-1.1 ರಲ್ಲಿ** ಒದಗಿಸಲಾಗಿದೆ .

## 1.5 ಲೆಕ್ಕಪರಿಶೋಧನಾ ವಿಧಾನ

9 ಅಕ್ಟೋಬರ್ 2020ರಂದು ವಸತಿ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು. ಅದರಲ್ಲಿ ಲೆಕ್ಕಪರಿಶೋಧನಾ ವಿಧಾನ, ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳನ್ನು ವಿವರಿಸಲಾಯಿತು. ಲೆಕ್ಕಪರಿಶೋಧನಾ ವಿಧಾನವು ದಾಖಲೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನಾ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳು, ಕೆಎಸ್‌ಡಿಬಿ/ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿ) ಅಧಿಕಾರಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆ, ಛಾಯಾಚಿತ್ರ ಸಾಕ್ಷ್ಯಗಳ ಸಂಗ್ರಹ ಮತ್ತು ಫಲಾನುಭವಿ ಸಮೀಕ್ಷೆಗಳನ್ನು ಒಳಗೊಂಡಿತ್ತು. 16 ಸೆಪ್ಟೆಂಬರ್ 2021ರಂದು ನಡೆದ ನಿರ್ಗಮನ ಸಭೆಯಲ್ಲಿ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ವಸತಿ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರದ ಪ್ರತಿಕ್ರಿಯೆಯನ್ನು 16 ಸೆಪ್ಟೆಂಬರ್ 2021ರಂದು ಸ್ವೀಕರಿಸಲಾಗಿದೆ ಮತ್ತು ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿದೆ.

## 1.6 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವಲ್ಲಿ ಸಹಕಾರ ಮತ್ತು ನೆರವು ನೀಡಿದ ರಾಜ್ಯ ಸರ್ಕಾರ, ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ನಿಗಮ ಮತ್ತು ಎಲ್ಲ ಯುಎಲ್‌ಬಿಗಳನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

## 1.7 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ನಾಲ್ಕು ಅಧ್ಯಾಯಗಳಲ್ಲಿ ಆಯೋಜಿಸಲಾಗಿದೆ– ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ, ಪಾಲುದಾರಿಕೆಯಲ್ಲಿ ಕೈಗೆಟುಕುವ ವಸತಿ, ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ.